23	ಮಂಡ್ಯ	156	49
24	ಮೈಸೂರು	237	97
25	ರಾಯಚೂರು	492	41
26	ಶಿವಮೊಗ್ಗ	61	314
27	ತುಮಕೂರು	184	519
28	ಉಡುಪಿ	31	00
29	ಉತ್ತರ ಕನ್ನಡ	678	157
	ಒಟ್ಟು	5786	2926

ಶ್ರೀ ಎಂ.ಸತ್ಯನಾರಾಯಣ: ರಾಜ್ಯದಲ್ಲಿ ಸುಮಾರು 23,000 ಅಂಗನವಾಡಿಗಳ ಕೊರತೆ ಇದೆ, ಮೈಸೂರಿನಲ್ಲಿ 1100 ಅಂಗನವಾಡಿಗಳ ಕೊರತೆ ಇದೆಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಅಂಗನವಾಡಿಗಳ ಕೊರತೆಯಿಂದ ಬಹಳಷ್ಟು ಮಕ್ಕಳಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಆದ್ಯತೆ ನೀಡಿ ತಾಲ್ಲೂಕಿಗೆ ಅಂಗನವಾಡಿಗಳನ್ನು ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಕೇವಲ ಮೂರು ಅಂಗನವಾಡಿಗಳು ಮಾತ್ರ ಇದೆ. ಆ ದೃಷ್ಟಿಯಿಂದ ಇದಕ್ಕೆ ಹೆಚ್ಚಿನ ರೀತಿಯಲ್ಲಿ ಒತ್ತು ಕೊಟ್ಟು ಸೌಕರ್ಯ ಕಲ್ಪಿಸಿ ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ: ಆಯ್ಕೆಪಟ್ಟಿ ಅನುಮೋದನೆ ಆಗಬೇಕಾಗಿದೆ. ಅನುಮೋದನೆ ಆದನಂತರ ಪ್ರತಿ ತಾಲ್ಲೂಕಿಗೆ ಹೆಚ್ಚುವರಿಯ ಕಟ್ಟಡಗಳನ್ನು ಒದಗಿಸಲಾಗುತ್ತದೆ. ಹಣಕಾಸಿನ ಲಭ್ಯತೆ ಆಧಾರದ ಮೇಲೆ ಇನ್ನೂ ಹೆಚ್ಚಿನ ಕಟ್ಟಡಗಳನ್ನು ನೀಡಲಾಗುವುದು ಎಂದು ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಯು.ಟಿ.ಖಾದರ್: ಕಳೆದ ಒಂದು ತಿಂಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಕ್ಕಳಿಗೆ ಕಳಪೆ ಆಹಾರವನ್ನು ಪೂರೈಸಲಾಗಿದೆ ಎಂಬುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ತನಿಖೆಗೆ ಆದೇಶಿಸಲಾಗಿದೆ.

ಸಭಾಧ್ಯಕ್ಷರು: ಖಾದರ್‌ರವರೇ ಅವರು ಕೇಳುತ್ತಿರುವುದು ಕಟ್ಟಡದ ಬಗ್ಗೆ ನೀವು ಕೇಳುತ್ತಿರುವುದು ಕಳಪೆ ಆಹಾರದ ಬಗ್ಗೆ ಕಟ್ಟಡದ ಬಗ್ಗೆ ಮಾತ್ರ ಕೇಳಿ, ಅಂಗನವಾಡಿಯ ಜನರಲ್ ಆಗಿರುವ ಸಮಸ್ಯೆಯನ್ನು ಪ್ರಶ್ನೋತ್ತರ ಕಾಲದಲ್ಲಿ ಚರ್ಚೆ ಮಾಡಲಿಕ್ಕಾಗುವುದಿಲ್ಲ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳ ಬಗ್ಗೆ

30(288) ಶ್ರೀ ಎನ್. ಹ್ಯಾರಿಸ್(ಶಾಂತಿನಗರ)

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರದವರು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು?

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರದವರು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ–1ಎ ರಲ್ಲಿ ನೀಡಿದೆ.

ಆ) 2008–09ನೇ ಸಾಲಿಗೆ ವಿವಿಧ ಯೋಜನೆಗಳಡಿಯಲ್ಲಿ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯವನ್ನು ಪಡೆದ ಜಿಲ್ಲಾವಾರು ಫಲಾನುಭವಿಗಳ ಮಾಹಿತಿಯನ್ನು ಅನುಬಂಧ –2 ರಲ್ಲಿ ನೀಡಿದೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಮದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ಮಾಹಿತಿಯನ್ನು ಅನುಬಂಧ–2ಎ ರಲ್ಲಿ ನೀಡಿದೆ.

ಇ) ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು

ಮಕ್ಕಳ ರಕ್ಷಣೆಗಾಗಿ ಸರ್ಕಾರವು ಬಾಲನ್ಯಾಯ (ಪಾಲನೆ ಮತ್ತು ಪೋಷಣೆ) ಕಾಯಿದೆ, 2000 ಮತ್ತು ತಿದ್ದುಪಡಿ 2004ನ್ನು ಅನುಷ್ಠಾನ ಗೊಳಿಸುತ್ತಿದೆ. ಮಕ್ಕಳ ಬೆಳವಣಿಗೆ, ಆರೋಗ್ಯ, ಪೌಷ್ಠಿಕತೆ ಹಾಗೂ ಶೈಕ್ಷಣಿಕೆ ಮಟ್ಟವನ್ನು ಹೆಚ್ಚಿಸಲು ಅನುಕೂಲವಾಗುವಂತೆ ಶಾಲಾ ಪೂರ್ವ ಶಿಕ್ಷಣವನ್ನು ಒಳಗೊಂಡ ಸಮಗ್ರ ಶಿಶು ಅಭಿವೃರ್ದಧಿ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಹೆಣ್ಣು ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಭಾಗ್ಯಲಕ್ಷ್ಮಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮಹಿಳೆಯರಿಗಾಗಿ ಇರುವ ಎಲ್ಲಾ ಅಧಿನಿಯಮಗಳನ್ನು ಮತ್ತು ಶಾಸನಗಳನ್ನು ಅನುಷ್ಠಾನಗೊಳಿಸಿ ಮಹಿಳೆಯರಿಗೆ ಸೂಕ್ತ ರಕ್ಷಣೆ ಭದ್ರತೆಯನ್ನು ಒದಗಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾಗಿ ಕೌಟುಂಬಿಕ ದೌರ್ಜನ್ಯ ಕಾಯಿದೆ, ವರದಕ್ಷಿಣೆ ನಿಷೇದ ಕಾಯಿದೆ, ಬಾಲ ವಿವಾಹ ನಿಷೇಧ ಕಾಯಿದೆ, ಕಡ್ಡಾಯ ವಿವಾಹ ನೋಂದಣಿ, ಹೆಣ್ಣು ಮಗುವಿನ ಭ್ರೂಣ ಹತ್ಯೆ ನಿಷೇಧ ಕಾಯಿದೆ ಮುಂತಾದವುಗಳು ಒಳಗೊಂಡಿರುತ್ತದೆ ಹಾಗೂ ಮಹಿಳೆಯರ ರಕ್ಷಣೆ ಮತ್ತು ಪುನರ್ವಸತಿಗಾಗಿ ರಾಜ್ಯ ಮಹಿಳಾ ನಿಲಯಗಳು, ಸ್ವೀಕಾರ ಕೇಂದ್ರಗಳು, ಸಾಂತ್ವನ ಕೇಂದ್ರಗಳು (ಮಹಿಳಾ ಸಹಾಯವಾಣೀ) ಸ್ವಾಧಾರ ಕೇಂದ್ರಗಳನ್ನು ನಡೆಸಲಾಗುತ್ತಿದೆ.

ಈ) ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಮತ್ತು ಮಕ್ಕಳು ಕಾಣೆಯಾಗುತ್ತಿರುವುದು ಹಾಗೂ ಕೊಲೆ ಮತ್ತಿತರ ಸಂಕಷ್ಟಗಳಿಗೆ ತುತ್ತಾಗುವ ಸಂಖ್ಯೆ ಹೆಚ್ಚುತ್ತಿದ್ದು ಆ ಕುರಿತು ಇಲಾಖೆಯ ಕ್ರಮಗಳೇನು?

ಕಾಣೆಯಾಗಿರುವ ಮಕ್ಕಳ ಪತ್ತೆಗಾಗಿ ಪೋಲಿಸ್ ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಕಾಣೆಯಾದ ಮಕ್ಕಳ ಹುಡುಕುವಿಕೆ (Missing Child Search) ಎಂಬ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಿ ಮಕ್ಕಳ ಜಾಡನ್ನು ತಿಳಿಯಲು ಅವಕಾಶ ಮಾಡಿದೆ. ಇದಲ್ಲದೆ, ಮಕ್ಕಳ ಸಹಾಯವಾಣಿ ಹಾಗೂ ಮಹಿಳಾ ಸಹಾಯವಾಣಿಗಳನ್ನು ತೆರೆದು ಸಂಕಷ್ಟಕ್ಕೊಳಗಾದ ಮಕ್ಕಳು ಮತ್ತು ಮಹಿಳೆಯರಿಗೆ ದಿನದ 24 ಗಂಟೆಯೂ ಸಹಾಯ ಹಸ್ತವನ್ನು ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಗ್ರಾಮ ಮಟ್ಟದಿಂದ ಹಿಡಿದು ರಾಜ್ಯ ಮಟ್ಟದವರೆಗೂ ಮಹಿಳಾ ಮತ್ತು ಮಕ್ಕಳ ಸಾಗಣೆ ಮತ್ತು ಮಾರಾಟದ ಬಗ್ಗೆ ತಿಳುವಳಿಕೆ ಕಾರ್ಯಕ್ರಮಗಳನ್ನು ತರಬೇತಿ ಶಿಬಿರಗಳನ್ನು ಹಮ್ಮಿಕೊಂಡಿದೆ.

ಅನುಬಂಧ–1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು.

1. ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು:

1. ಸ್ತ್ರೀಶಕ್ತಿ ಯೋಜನೆ
2. ಸಾಂತ್ವನ
3. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ
4. ಕಾನೂನು ಪದವಿ ಪಡೆದ ಮಹಿಳೆಯರಿಗೆ ಆರ್ಥಿಕ ನೆರವು
5. ಕೌಟುಂಬಿಕ ಹಿಂಸೆಯಿಂದ ಮಹಿಳೆಯರನ್ನು ರಕ್ಷಿಸುವ ಕಾಯ್ದೆ, 2005
6. ಕರ್ನಾಟಕ ವಿವಾಹ ನೋಂದಣಿ ಕಾಯ್ದೆ, 1976
7. ನಿರ್ಗತಿಕ ವಿಧವೆಯರ ಹಾಗೂ ದೇವದಾಸಿಯರ ಮರು ವಿವಾಹಕ್ಕೆ ಆರ್ಥಿಕ ನೆರವು.

ಕೇಂದ್ರ ವಲಯ ಕಾರ್ಯಕ್ರಮಗಳು:

1. ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳು
2. ಸ್ವಾಧಾರ
3. ಮದ್ಯ ಮತ್ತು ಮಾದಕ ವಸ್ತುಗಳ ದುರುಪಯೋಗವನ್ನು ತಡೆಗಟ್ಟಲು ಸಹಾಯ.

II. **ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳು :**

1. ಭಾಗ್ಯಲಕ್ಷ್ಮೀ ಯೋಜನೆ:
2. ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ
3. ಚೈಲ್ಡ್ ಟ್ರ್ಯಾಕಿಂಗ್ ಪದ್ಧತಿ
4. ಬಾಲಕಿಯರ ವಸತಿ ನಿಲಯಗಳು
5. ಮಕ್ಕಳ ಪಾಲನೆ ಪೋಷಣೆ ಅಗತ್ಯವಿರುವ ಮಕ್ಕಳ ಕಲ್ಯಾಣ ಯೋಜನೆ
6. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಹಾಜರಾತಿ ಶಿಷ್ಯ ವೇತನ
7. ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು
8. ಬಾಲ್ಯವಿವಾಹ ನಿಷೇಧ ಕಾಯ್ದೆ, 2006(ಕೇಂದ್ರ ಕಾಯ್ದೆ) 2006
9. ಧೈರ್ಯ ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು
10. ಮಹಿಳೆಯರ ಮತ್ತು ಮಕ್ಕಳ ಸಾಗಣೆ ತಡೆಗಟ್ಟುವ ಯೋಜನೆ
11. ಬಾಲ ವಿಕಾಸ ಅಕಾಡೆಮಿ:
12. ಏಡ್ಸ್ ಖಾಯಿಲೆಯಿಂದ ಬಾಧಿತರಾದ ಮಕ್ಕಳಿಗೆ ಸಂರಕ್ಷಣಾ ಕೇಂದ್ರಗಳು.
13. ಬಾಲಭವನ ಸೊಸೈಟಿ
14. ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ.

ಕೇಂದ್ರ ವಲಯ ಕಾರ್ಯಕ್ರಮಗಳು:

1. ಸಮಗ್ರ ಶಿಶು ಅಭಿವೃದ್ಧಿ ಯೋಜನೆ
2. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮ
3. ಕಿಶೋರಿ ಶಕ್ತಿ ಯೋಜನೆ

III. **ಸಾಮಾಜಿಕ ರಕ್ಷಣೆಯ ಕಾರ್ಯಕ್ರಮಗಳು:**

1. **ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕಾಯಿದೆ 2006 ಹಾಗೂ ತಿದ್ದುಪಡಿ 2006:**

ಅ. ವೀಕ್ಷಣಾಲಯಗಳು
ಆ. ಬಾಲ ಮಂದಿರಗಳು
ಇ. ಅರ್ಹ ಸಂಸ್ಥೆಗಳು
ಈ. ಬಾಲ ನ್ಯಾಯ ಕಾಯ್ದೆ ಕಾರ್ಯಕ್ರಮ (ಕೇಂದ್ರ ಪುರಸ್ಕೃತ) ಯೋಜನೆ
ಉ. ಸುಧಾರಣಾ ಸಂಸ್ಥೆ ನಿವಾಸಿಗಳಿಗೆ ಕೌಶಲ್ಯಾಭಿವೃದ್ಧಿ ಯೋಜನೆಯಡಿ ತರಬೇತಿ
ಊ. ಕುಟುಂಬದ ವಾತಾವರಣದಲ್ಲಿ ಮಕ್ಕಳನ್ನು ಬೆಳೆಸಲು ಪ್ರಾಯೋಜಿತ ಕಾರ್ಯಕ್ರಮ

2. **ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ 1956**
3. **ಅನೈತಿಕ ವ್ಯವಹಾರಗಳ (ತಡೆಗಟ್ಟುವುದು) ಅಧಿನಿಯಮ 1956 ಮತ್ತು ಸಾಮಾಜಿಕ ಹಾಗೂ ನೈತಿಕ ಆರೋಗ್ಯ ಕಾರ್ಯಕ್ರಮಗಳು:**

ಅ. ಸ್ವೀಕಾರ ಕೇಂದ್ರಗಳು

ಆ. ರಾಜ್ಯ ಮಹಿಳಾ ನಿಲಯಗಳು

4. ಅನುಪಾಲನಾ ಸೇವೆಗಳು

5. ಬುದ್ದಿ ಮಾಂದ್ಯ ಮಕ್ಕಳ ಅನುಪಾಲನಾ ಗೃಹ

6. ಇತರೆ ಕಾರ್ಯಕ್ರಮಗಳು:

ಅ) ಮಕ್ಕಳ ಸಹಾಯವಾಣಿ ಸೇವೆ

ಆ) ದತ್ತು ಸ್ವೀಕಾರ

ಇ) ಸ್ವದೇಶಿ ದತ್ತು ಕಾರ್ಯಕ್ರಮ ಪ್ರೋತ್ಸಾಹಿಸಲು ಸಂಸ್ಥೆಗಳಿಗೆ ಆರ್ಥಿಕ ಸಹಾಯ ಯೋಜನೆ (ಶಿಶು ಗೃಹ):

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 2008-09 ಸಾಲಿನ ಭೌತಿಕ ಗುರಿ ಹಾಗೂ ಸಾಧನೆಯ ವಿವರ:

ಕ್ರಮ ಸಂಖ್ಯೆ	ಯೋಜನೆಗಳ ಹೆಸರು	ಭೌತಿಕ	
	ರಾಜ್ಯ ವಲಯ	ಭೌತಿಕ ಗುರಿ	ಭೌತಿಕ ಸಾಧನೆ
	ಮಕ್ಕಳ ಕಲ್ಯಾಣ		
1	ಮಕ್ಕಳ ದಿನಾಚರಣೆ ಹಾಗೂ ಮಹಿಳಾ ದಿನಾಚರಣೆ ಮತ್ತು ಶೌರ್ಯ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು 2235-02-102-0-99	20	17
2	ಅಂಗನವಾಡಿ ಕಾರ್ಯಕರ್ತೆಯರ ತರಬೇತಿಗಾಗಿ ಕೇಂದ್ರ ಪುರಸ್ಕೃತ ಯೋಜನೆ (ಶೇಕಡಾ 100) 2235-02-102-0-05	15475	16844
3	ಮಹಿಳೆಯರ ಮತ್ತು ಮಕ್ಕಳ ಅನೈತಿಕ್ ಸಾಗಾಟದ ನಿವಾರಣೆಯ ಯೋಜನೆ 2235-02-102-0-24-100	16640	16640
4	ಭಾಗ್ಯಲಕ್ಷ್ಮಿ 2235-02-102-0-25-100	200000	297811
5	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ 2235-02-102-0-27-117	348	200
6	ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆ 2235-02-102-0-30-059	8656	8656

	ಮಹಿಳಾ ಕಲ್ಯಾಣ		
7	ಕಾನೂನು ಪದವಿ ಪಡೆದ ಮಹಿಳೆಯರ ತರಬೇತಿಗೆ ಆರ್ಥಿಕ ನೆರವು 2235-02-103-0-31-100	585	572
8	ಬಾಲಕಿಯರಿಗಾಗಿ ವಸತಿ ನಿಲಯ 2235-02-103-0-99-100	42	42
9	ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಕ್ಷೇಮಾಭಿವೃದ್ಧಿ ನಿಧಿ 2235-02-103-0-99-100	195	224
10	ಸಾಂತ್ವನ -ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ನೆರವು 2235-02-103-0-99-100	90	109
11	ಸ್ತ್ರೀಶಕ್ತಿ ಯೋಜನೆ 2235-02-103-0-41	109899	87887
12	ಗರ್ಭಿಣಿ ಹಾಗೂ ಹಾಲುಣಿಸುವ ಮಹಿಳೆಯರು ಹಾಗೂ ಪ್ರಾಯ ಪೂರ್ವ ಬಾಲಕಿಯರಿಗೆ ಆಹಾರ ಧಾನ್ಯವನ್ನು ಒದಗಿಸುವ ಪ್ರಧಾನ ಮಂತ್ರಿಯವರ ಪ್ರಾಯೋಗಿಕ ಯೋಜನೆ 2235-02-103-0-46	198822	196679
13	ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರಿಗೆ ರಕ್ಷಣೆ ನೀಡುವ 2235-02-103-0-52-059	214	214
	ಸುಧಾರಣಾ ಕಾರ್ಯಕ್ರಮಗಳು		
14	ಕಟ್ಟಡಗಳು (ದುರಸ್ತಿ) 2235-02-106-0-05-132	--	19
15	ರಾಜ್ಯ ಮಹಿಳಾ ನಿಲಯ ಹಾಗೂ ಸ್ವೀಕಾರಕೇಂದ್ರಗಳು 2235-02-106-0-06	13 ಸಂಸ್ಥೆಗಳು	13
16	ಬಾಲಮಂದಿರಗಳು ಮತ್ತು ಪ್ರತಿಪ್ರೇಕ್ಷಣಾ ಗೃಹಗಳು 2235-02-106-0-08	75 ಸಂಸ್ಥೆಗಳು	75
17	ಎ ಪ್ರೋಗ್ರಾಂ ಫಾರ್ ಜುವೆನೈಲ್	35 ಸಂಸ್ಥೆಗಳು	35

	ಜಸ್ಟೀಸ್ (ಕೇಂದ್ರ ಪುರಸ್ಕೃತ ಯೋಜನೆ) (50:50) 2235-02-106-0-10		
18	ಮಕ್ಕಳನ್ನು ಕುಟುಂಬ ವಾತಾವರಣದಲ್ಲಿ ಬೆಳೆಸಲು ಪ್ರಾಯೋಜಿತ ಕಾರ್ಯಕ್ರಮ 2235-02-106-0-13-059	335 ಮಕ್ಕಳು	729 ಮಕ್ಕಳು
19	ಸುಧಾರಣಾ ಸಂಸ್ಥೆಗಳ ನಿವಾಸಿಗಳಿಗೆ ವಿವಿಧ ಕೌಶಲ್ಯತೆಗಳಲ್ಲಿ ತರಬೇತಿ 2235-02-106-0-14-059	200 ನಿವಾಸಿಗಳು	470 ನಿವಾಸಿಗಳು
	ಬಂಡವಾಳ ವೆಚ್ಚ		
20	ಕಟ್ಟಡ ನಿರ್ಮಾಣ 4235-02-106-1-01-139	--	10
21	ನಬಾರ್ಡ್ ನೆರವಿನಿಂದ ಅಂಗನವಾಡಿ ಕಟ್ಟಡ ನಿರ್ಮಾಣ 4235-02-102-1-01-436	1044	99
22	ಮಾರುಕಟ್ಟೆ ಮಳಿಗೆಗಳ ನಿರ್ಮಾಣ 4235-60-800-2-02-386	29	29
23	ತಾಲ್ಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಉತ್ಪನ್ನಗಳಿಗಾಗಿ ಮಾರುಕಟ್ಟೆ ಮಳಿಗೆಗಳ ನಿರ್ಮಾಣ 4235-02-103-1-02-071	50	50
24	ಅಂಗನವಾಡಿ ಕಟ್ಟಡಗಳ ನಿರ್ಮಾಣ (ವಿಶೇಷ ಅಭಿವೃದ್ಧಿ ಯೋಜನೆ) 4235-02-102-1-02-386	882	0
	ಜಿಲ್ಲಾ ವಲಯ ಯೋಜನೆಗಳು		
1	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) ಕೇಂ.ಪು.ಯೋಜನೆ (ಶೇ.1 00) 2235-02-102-0-04	185 ಯೋಜನೆಗಳು	185 ಯೋಜನೆಗಳು
2	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) ಕೇಂ.ಪು.ಯೋಜನೆ (ಶೇ.1 00) 2235-02-102-0-56	29 ಜಿಲ್ಲಾ ಘಟಕ	29 ಜಿಲ್ಲಾ ಘಟಕ

3	ನಿರಾಧಾರ/ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆ 2235-02-102-0-53	330 ಕುಠೀರ	309 ಕುಠೀರ
4	ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ 2235-02-102-0-53	108925	106286
5	ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ 2235-02-102-0-73	400 ಕೇಂದ್ರಗಳು	395 ಕೇಂದ್ರಗಳು
6	ಅಂಗನವಾಡಿ ಕಟ್ಟಡ ನಿರ್ಮಾಣ 2235-02-102-0-79	159	148
7	5ನೇ ತರಗತಿಯಿಂದ 10ನೇ ತರಗತಿಯ ವಿದ್ಯಾರ್ಥಿನಿಯರಿಗೆ ಹಾಜರಾತಿ ವಿದ್ಯಾರ್ಥಿ ವೇತನ 2235-02-102-0-99	22065	23153
8	ವಿಧವೆಯರ ಮತ್ತು ದೇವದಾಸಿ ವಿವಾಹಕ್ಕೆ ಧನ ಸಹಾಯ 2235-02-103-0-61	76	22
9	ಶಾಲಾ ಪೂರ್ವ ಮಕ್ಕಳ ಊಟದ ಯೋಜನೆ 2236-02-101-0-51	4411702	4099271

ಅನುಬಂಧ-1ಎ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು 1987ರಲ್ಲಿ ಕಂಪನಿಯ ಅಧಿನಿಯಮ 1956ರ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ. ಸಮಾಜದ ದುರ್ಬಲ ಹಾಗೂ ಅಸಹಾಯಕ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ನಿಗಮದಿಂದ ಈ ಕೆಳ ಕಾಣಿಸಿದ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು ಪ್ರಗತಿಯ ವಿವರಗಳನ್ನು ನೀಡಲಾಗಿದೆ.

1. **ಉದ್ಯೋಗಿನಿ ಯೋಜನೆ:** ಈ ಯೋಜನೆಯಡಿ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು, ವ್ಯಾಪಾರ ಚಟುವಟಿಕೆ ತೊಡಗಿಸಿಕೊಳ್ಳುವ ಉದ್ದೇಶಕ್ಕಾಗಿ ರೂ.1.00 ಲಕ್ಷಗಳನ್ನು ಒಂದು ಘಟಕಕ್ಕೆ ನಿಗಮದಿಂದ ಸಾಮಾನ್ಯ ಮಹಿಳೆಯರಿಗೆ ರೂ.7,500/- ಹಾಗೂ ಪರಿಶಿಷ್ಟ ಪಂಗಡದವರಿಗೆ ಗರಿಷ್ಟ ರೂ.10,000/- ಗಳನ್ನು

ಸಹಾಯಧನವನ್ನಾಗಿ ಒದಗಿಸಲಾಗುತ್ತಿದೆ. ಉಳಿದ ಮೊಬಲಗನ್ನು ಬ್ಯಾಂಕುಗಳಿಂದ ಸಾಲವನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಇದುವರೆಗೆ 18156 ಮಹಿಳೆಯರಿಗೆ ಆರ್ಥಿಕ ನೆರವನ್ನು ಕಲ್ಪಿಸಲಾಗಿದೆ. 2009–10ನೇ ಸಾಲಿನಲ್ಲಿ ಒಟ್ಟು 5563 ಮಹಿಳೆಯರಿಗೆ ಆರ್ಥಿಕ ನೆರವು ನೀಡಲು ಉದ್ದೇಶಿಸಲಾಗಿದೆ.

ಈ ಯೋಜನೆಯನ್ನು ಡಾ:ನಂಜುಂಡಪ್ಪ ವರದಿಯಲ್ಲಿ ಗುರುತಿಸಿರುವ ಹಿಂದುಳಿದ ತಾಲ್ಲೂಕುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳಲು ಸಹ ಉದ್ದೇಶಿಸಲಾಗಿದೆ.

2. **ಆಸರೆ ಯೋಜನೆ:** ಈ ಯೋಜನೆಯು 2007–08 ರಿಂದ ಪ್ರಾರಂಭವಾಗಿದ್ದು, ಮಹಿಳೆಯರು ಘಟಕ ವೆಚ್ಚ ರೂ.1.00 ಲಕ್ಷಗಳಿಗೆ ಮೀರಿದ ವ್ಯಾಪಾರ, ಕೈಗಾರಿಕೆ, ಕೃಷಿ ಮತ್ತು ಕೃಷಿ ಅವಲಂಬಿತ ಚಟುವಟಿಕೆಗಳನ್ನು ಮತ್ತು ಸೇವಾ ಚಟುವಟಿಕೆಗಳನ್ನು ಕೈಗೊಳ್ಳಲು ನಿಗಮದ ವತಿಯಿಂದ ರೂ.25,000/– ಗಳವರೆಗೆ ಶೇಕಡ 4ರ ಬಡ್ಡಿ ದರದಲ್ಲಿ ಮಾರ್ಜಿನ್ ಹಣವನ್ನು ಹಾಗೂ ಗರಿಷ್ಠ ರೂ.10,000/–ಗಳ ಸಹಾಯಧನವನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುವುದು. ಈ ಯೋಜನೆಯಡಿ ಇದುವರೆಗೆ 1642 ಮಹಿಳೆಯರಿಗೆ ಆರ್ಥಿಕ ಸೌಲಭ್ಯವನ್ನು ಕಲ್ಪಿಸಲಾಗಿದೆ.

3. **ಮಹಿಳಾ ತರಬೇತಿ ಯೋಜನೆ:** ಆರ್ಥಿಕವಾಗಿ ಹಿಂದುಳಿದ ಅಸಹಾಯಕ ಮಹಿಳೆಯರು ಆರ್ಥಿಕವಾಗಿ ಸ್ವಾಲಂಬಿಗಳಾಗಲು ಅವರಿಗೆ ವಿವಿಧ ಕೌಶಲ್ಯಗಳಲ್ಲಿ ತರಬೇತಿಗಳನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಇದುವರೆಗೆ 11.366 ಮಹಿಳೆಯರಿಗೆ ತರಬೇತಿಯನ್ನು ನೀಡಲಾಗಿದೆ. 2009–10ನೇ ಸಾಲಿನಲ್ಲಿ ರೂ.235.00 ಲಕ್ಷಗಳ ಆಯವ್ಯಯದಲ್ಲಿ 4755 ಮಹಿಳೆಯರಿಗೆ ವಿವಿಧ ರೀತಿಯ ತರಬೇತಿಯನ್ನು ನೀಡಲಾಗುವುದು.

4. **ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ:** ಈ ಯೋಜನೆಯಡಿ ನಿಗಮದ ಕೇಂದ್ರ ಕಛೇರಿಯಲ್ಲಿ, ಮಂಗಳೂರು, ಬೆಳಗಾವಿ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗುಲ್ಬರ್ಗಾ, ಮೈಸೂರು, ಮಂಡ್ಯ, ಬಳ್ಳಾರಿ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಮಗಳೂರು ಸೇರಿ ಒಟ್ಟು 13 ಜಿಲ್ಲೆಗಳಲ್ಲಿ ಮಹಿಳಾ ಸ್ವ–ಉದ್ಯೋಗ ಸಲಹಾ ಕೇಂದ್ರಗಳನ್ನು ನಿರ್ವಹಿಸಲಾಗುತ್ತಿದೆ.

ಈ ಯೋಜನೆಯಡಿಯಲ್ಲಿ ಮಹಿಳೆಯರಿಗೆ ಸ್ವ–ಉದ್ಯೋಗವನ್ನು ಸ್ಥಾಪಿಸಿಕೊಳ್ಳಲು ಮಾರ್ಗದರ್ಶನ ನೀಡಲಾಗುವುದು. ಇದಲ್ಲದೆ ಲಿಂಗ ತಾರತಮ್ಯದ ಬಗ್ಗೆ ಕಾರ್ಯಾಗಾರ ಏರ್ಪಡಿಸುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಯೋಜನೆಯಡಿ ಇದುವರೆಗೆ 16,661 ಮಹಿಳೆಯರು ಈ ಯೋಜನೆಯಡಿ ಪ್ರಯೋಜನ ಪಡೆದಿರುತ್ತಾರೆ. ಈ ಯೋಜನೆಯನ್ನು 2009–10ನೇ ಸಾಲಿಗೆ ರಾಯಚೂರು, ಶಿವಮೊಗ್ಗ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ.

5. ಮಾರುಕಟ್ಟೆ ನೆರವು ಯೋಜನೆ: ಈ ಯೋಜನೆಯಡಿ ಮಹಿಳಾ ಉದ್ದಿಮೆದಾರರು ಹಾಗೂ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಅನುಕೂಲ ಕಲ್ಪಿಸಲು ವಸ್ತು ಪದರ್ಶನ ಮತ್ತು ಮಾರಾಟ ಮೇಳವನ್ನು ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಲಾಗುತ್ತಿದೆ. 2009–10ನೇ ಸಾಲಿಗೆ ಈ ಯೋಜನೆಗೆ ರೂ.35.00 ಲಕ್ಷಗಳ ಆರ್ಥಿಕ ಗುರಿಯನ್ನು ಹಾಗೂ 1055 ಭೌತಿಕ ಗುರಿಯನ್ನು ನಿಗದಿಪಡಿಸಲಾಗಿದೆ.

6. ದೇವದಾಸಿ ಪುನರ್ವಸತಿ ಯೋಜನೆ: ಈ ಯೋಜನೆಯಲ್ಲಿ ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿಗಾಗಿ ಯೋಜನೆಗಳನ್ನು ಹಮ್ಮಿಕೊಂಡಿದ್ದು ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ಕೈಗೊಳ್ಳಲು ನೆರವು ನೀಡುವುದು, ಸ್ವಸಹಾಯ ಗುಂಪುಗಳ ರಚನೆ, ಆರೋಗ್ಯ ತಪಾಸಣಾ ಶಿಬಿರಗಳು, ಜನ ಜಾಗೃತಿ ಶಿಬಿರಗಳು ಈ ಪದ್ಧತಿಯ ನಿರ್ಮೂಲನೆಗಾಗಿ ಒಳಗೊಂಡಿರುತ್ತದೆ. 1993ರಲ್ಲಿ ನಡೆಸಿರುವ ಸಮೀಕ್ಷೆಯಂತೆ ರಾಜ್ಯದ 10 ಜಿಲ್ಲೆಗಳಲ್ಲಿ ಒಟ್ಟು 22,873 ಮಾಜಿ ದೇವದಾಸಿ ಮಹಿಳೆಯರನ್ನು ಗುರುತಿಸಲಾಗಿದ್ದು ಅವರುಗಳಿಗೆ ಪುನರ್ವಸತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು ಈಗಾಗಲೆ 14,476 ಮಾಜಿ ದೇವದಾಸಿ ಮಹಿಳೆಯರಿಗೆ ಆದಾಯ ಉತ್ಪನ್ನಕರ ಚಟುವಟಿಕೆಗಳನ್ನು ತೆಗೆದುಕೊಳ್ಳಲು ನೆರವು ನೀಡಲಾಗಿದೆ. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ನಿವೇಶನ ಹೊಂದಿರುವ ಮಾಜಿ ದೇವದಾಸಿ ಮಹಿಳೆಯರಿಗೆ ಒದಗಿಸಲಾಗಿರುವ ಅನುದಾನಕ್ಕೆ ಅನುಗುಣವಾಗಿ ಮನೆಗಳನ್ನು ನಿರ್ಮಿಸಿಕೊಡಲಾಗುತ್ತಿದೆ.

2009–10ನೇ ಸಾಲಿನಲ್ಲಿ 2500 ಮಹಿಳೆಯರಿಗೆ ಆದಾಯೋತ್ಪನ್ನಕರ ಚಟುವಟಿಕೆಗಳಡಿ ಸಾಲ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

7. ಮಾಜಿ ದೇವದಾಸಿಯರಿಗೆ ಮಾಸಾಶನ: ಕರ್ನಾಟಕ ಸರ್ಕಾರ 1993–94ನೇ ಸಾಲಿನಲ್ಲಿ ನಡೆಸಲಾದ ಸಮೀಕೆಯಲ್ಲಿ ಗುರುತಿಸಲ್ಪಟ್ಟ 22873 ಮಾಜಿ ದೇವದಾಸಿ ಮಹಿಳೆಯರ ಪೈಕಿ 45 ವರ್ಷ ಹಾಗೂ ಅದಕ್ಕೂ ಮೀರಿದ ಮಾಜಿ ದೇವದಾಸಿ ಮಹಿಳೆಯರಿಗೆ 2007–08ನೇ ಸಾಲಿನಿಂದ ಮಾಸಿಕ ರೂ. 400/–ಗಳ ಮಾಸಾಶನವನ್ನು ನೀಡಲಾಗುತ್ತಿದೆ. ಈಗಾಗಲೇ 15730 ಮಹಿಳೆಯರು ಈ ಯೋಜನೆಯಿಂದ ಪ್ರಯೋಜನ ಪಡೆದಿರುತ್ತಾರೆ. 2009–10ನೇ ಸಲಿಗೆ 16.666 ಮಾಜಿ ದೇವದಾಸಿಯರಿಗೆ ಮಾಶಾಸನ ನೀಡುವ ಗುರಿ ನಿಗದಿಪಡಿಸಿದೆ. ಆದರೆ ಈ ಯೋಜನೆಯನ್ನು ಕಂದಾಯ ಇಲಾಖೆಗೆ ವರ್ಗಾಯಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಅನುಬಂಧ–2

2008–09ನೇ ಸಾಲಿನಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ವಿವರ.

ಸ್ತ್ರೀಶಕ್ತಿ ಯೋಜನೆ

ಕ್ರ.	ವಿಷಯ	ಭೌತಿಕ

ಸಂ.		
1	ಸುತ್ತುನಿಧಿ	3983 ಗುಂಪುಗಳು
2	ಸಾಲ ನಿರ್ವಹಣೆ ತರಬೇತಿ	1000 ಗುಂಪುಗಳು
3	ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ	40000 ಗುಂಪುಗಳು
4	ಅತ್ಯತ್ತಮ ಗುಂಪುಗಳಿಗೆ ಪ್ರಶಸ್ತಿ	211 ಗುಂಪುಗಳು
5	ತಾಲ್ಲೂಕು ಒಕ್ಕೂಟಗಳ ಬಲವರ್ಧನೆ	175 ಒಕ್ಕೂಟಗಳು
6	ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ	29 ಜಿಲ್ಲೆ
7	ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹ ಧನ	650 ಗುಂಪುಗಳು
8	ಉತ್ಪಾದನಾ ಘಟಕಗಳಿಗೆ ಪ್ರೋತ್ಸಾಹ ಧನ	3600 ಗುಂಪುಗಳು
9	ಕೌಶಲ್ಯ ಅಭಿವೃದ್ಧಿ ತರಬೇತಿ	22400 ಗುಂಪುಗಳು
10	ಜಿಲ್ಲಾ ಮಾರುಕಟ್ಟೆ ಸಂಕೀರ್ಣ	28 ಜಿಲ್ಲಾ ಮಾರುಕಟ್ಟೆ ಸಂಕೀರ್ಣ
11	ತಾಲ್ಲೂಕು ಸ್ತ್ರೀಶಕ್ತಿ ಭವನ	50 ತಾಲ್ಲೂಕು ಸ್ತ್ರೀಶಕ್ತಿ ಭವನ

ಮಹಿಳಾ ಕಲ್ಯಾಣ ಕಾರ್ಯಕ್ರಮಗಳು

ಕ್ರಸಂ.	ಜಿಲ್ಲೆಗಳು	ಯೋಜನೆಯಡಿ ಸೌಲಭ್ಯ ಪಡೆದವರು				
		ಸಾಂತ್ವನ	ಬಾಲಕಿಯರ ವಸತಿ ನಿಲಯ	ಕಾನೂನು ಪದವಿ ಪಡೆದ ಮಹಿಳೆಯರಿಗೆ ಆರ್ಥಿಕ ಸಹಾಯ	ಗ್ರಾಮೀಣ ಬಾಲಕಿಯರಿಗೆ ಹಾಜರಾತಿ ಶಿಷ್ಯವೇತನ	ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ
1.	ಬಾಗಲಕೋಟೆ	5	150	9	1769	150
2.	ಬೆಂಗಳೂರು(ಗ್ರಾ)	32	–	29	–	–
3.	ಬೆಂಗಳೂರು (ನ)	169	–	6	–	225
4.	ಬೆಳಗಾಂ	161	125	18	–	625
5.	ಬಳ್ಳಾರಿ	129	150	15	1555	75
6.	ಬೀದರ್	103	225	14	1692	–
7.	ಬಿಜಾಪುರ	68	175	25	3889	50
8.	ಚಾಮರಾಜನಗರ	97	75	9	473	50
9.	ಚಿಕ್ಕಬಳ್ಳಾಪುರ	4	150	3	–	100

10.	ಚಿಕ್ಕಮಗಳೂರು	92	50	31	–	–
11.	ಚಿತ್ರದುರ್ಗ	120	50	24	–	325
12.	ದಕ್ಷಿಣ ಕನ್ನಡ	124	–	8	–	–
13.	ದಾವಣಗೆರೆ	103	50	23	–	–
14.	ಧಾರವಾಡ	178	50	25	–	50
15.	ಗದಗ	70	50	17	–	–
16.	ಗುಲ್ಬರ್ಗ	85	200	28	8143	225
17.	ಹಾಸನ	56	150	34	–	–
18.	ಹಾವೇರಿ	98	50	17	–	700
19.	ಕೊಡಗು	29	–	6	ನವೀಕರಣ ಫಲಾನುಭವಿಗಳಿಲ್ಲ	–
20.	ಕೋಲಾರ	108	100	19	863	350
21.	ಕೊಪ್ಪಳ	160	150	24	1074	150
22.	ಮಂಡ್ಯ	123	50	58	–	275
23.	ಮೈಸೂರು	219	50	25	–	75
24.	ರಾಯಚೂರು	31	200	21	809	–
25.	ರಾಮನಗರ	7	50	8	–	–
26.	ಶಿವಮೊಗ್ಗ	130	–	21	–	–
27.	ತುಮಕೂರು	120	50	20	ನವೀಕರಣ ಫಲಾನುಭವಿಗಳಿಲ್ಲ	225

28.	ಉಡುಪಿ	26	–	12	ನವೀಕರಣ ಫಲಾನುಭವಿಗಳಿಲ್ಲ	–
29.	ಉತ್ತರ ಕನ್ನಡ	31.	–	16	–	2475
	ಒಟ್ಟು	**2678**	**2350**	**565**	**20267**	**6125**

2008–09ನೇ ಸಾಲಿನಲ್ಲಿ "ಭಾಗ್ಯಲಕ್ಷ್ಮೀ" ಯೋಜನೆಯಡಿ ಸೌಲಭ್ಯವನ್ನು ಪಡೆದ ಫಲಾನುಭವಿಗಳ ವಿವರ (ಜಿಲ್ಲಾವಾರು)

ಕ್ರ. ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	12000
2	ಬೆಂಗಳೂರು ಗ್ರಾ	4899
3	ಬೆಂಗಳೂರು ನ	24804
4	ಬೆಳಗಾಂ	32833
5	ಬಳ್ಳಾರಿ	14655
6	ಬೀದರ್	5828
7	ಬಿಜಾಪುರ	16349
8	ಚಾಮರಾಜನಗರ	6953
9	ಚಿಕ್ಕಬಳ್ಳಾಪುರ	5305
10	ಚಿಕ್ಕಮಗಳೂರು	5573
11	ಚಿತ್ರದುರ್ಗ	8613
12	ದಕ್ಷಿಣ ಕನ್ನಡ	1645
13	ದಾವಣಗೆರೆ	10036
14	ಧಾರವಾಡ	7483
15	ಗದಗ	8038
16	ಗುಲ್ಬರ್ಗ	15065
17	ಹಾಸನ	9146

18	ಹಾವೇರಿ	11046
19	ಕೊಡಗು	2169
20	ಕೋಲಾರ	8150
21	ಕೊಪ್ಪಳ	9028
22	ಮಂಡ್ಯ	10520
23	ಮೈಸೂರು	16454
24	ರಾಯಚೂರು	13209
25	ರಾಮನಗರ	5371
26	ಶಿವಮೊಗ್ಗ	9040
27	ತುಮಕೂರು	14222
28	ಉಡುಪಿ	3498
29	ಉತ್ತರ ಕನ್ನಡ	5884
	ಒಟ್ಟು	**297816**

2008–09 ನೇ ಸಾಲಿನಲ್ಲಿ ಸಮಗ್ರ ಶಿಶುಅಭಿವೃದ್ಧಿಯೋಜನೆಯಡಿ ವಿವಿಧ ಯೋಜನೆಗಳಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳ ವಿವರ

ಕ್ರ ಸಂ	ಜಿಲ್ಲೆ	ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆ	ರಾಷ್ಟ್ರೀಯ ಪ್ರಾಯಪೂರ್ವ ಬಾಲಕಿಯರ ಪೌಷ್ಟಿಕ ಕಾರ್ಯಕ್ರಮ (ಮೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.)	ಕಿಶೋರಿ ಶಕ್ತಿ ಯೋಜನೆ	
				ಫಲಾನುಭವಿಗಳು	ತರಬೇತಿ ಪಡೆದ ಫಲಾನುಭವಿಗಳು
1	ಬಾಗಲಕೋಟೆ	303	–	3770	540
2	ಬೆಂಗಳೂರು (ನ)	22	–	3193	540
3	ಬೆಂಗಳೂರು (ಗ್ರಾ)	31	–	2021	360
4	ಬೆಳಗಾಂ	1524	–	9730	990

5	ಬಳ್ಳಾರಿ	873	–	4144	720
6	ಬೀದರ್	401	–	3159	540
7	ಬಿಜಾಪುರ	333	–	3567	540
8	ಚಾಮರಾಜನಗರ	34	–	2632	360
9	ಚಿಕ್ಕಮಂಗಳೂರು	49	–	3029	630
10	ಚಿತ್ರದುರ್ಗ	240	–	3618	540
11	ದಾವಣಗೆರೆ	499	–	3356	630
12	ಧಾರವಾಡ	375	–	2388	540
13	ದ.ಕನ್ನಡ	132	–	4009	540
14	ಗದಗ	259	–	2044	450
15	ಗುಲ್ಬರ್ಗ	878	114507	5852	990
16	ಹಾಸನ	39	–	4200	720
17	ಹಾವೇರಿ	550	–	3267	630
18	ಕೋಲಾರ	49	56772	3373	450
19	ಕೊಪ್ಪಳ	603	–	2738	360
20	ಕೊಡಗು	28	–	1613	270
21	ಮಂಡ್ಯ	56	–	4289	630
22	ಮೈಸೂರು	96	–	4785	720
23	ರಾಯಚೂರು	712	–	3538	450
24	ಶಿವಮೊಗ್ಗ	109	–	4064	630
25	ತುಮಕೂರು	154	–	6756	990
26	ಉಡುಪಿ	57	–	2226	360
27	ಉತ್ತರ ಕನ್ನಡ	143	–	3466	990
28	ರಾಮನಗರ	36	–	2492	360
29	ಚಿಕ್ಕಬಳ್ಳಾಪುರ	71	48090	3182	540
	ಒಟ್ಟು	**8656**	**219369**	**106501**	**17010**

2008–09 ನೇ ಸಾಲಿನ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದ ಫಲಾನುಭವಿಗಳ ವಿವರ

ಕ್ರ	ಜಿಲ್ಲೆಯ	6–3	3–6	ಗರ್ಭಿಣಿಯ	ಬಾಣಂತಿಯ	ಪ್ರಮೂ	ಒಟ್ಟು

ಸ ಂ.	ಹೆಸರು	ವರ್ಷ	ವರ್ಷ	ುರು	ುರು	ಬಾಲಕಿಯ ುರು	
1	ಬಾಗಲಕೋಟೆ	73920	71133	18680	18595	3770	186098
2	ಬೆಂಗಳೂರು(ಗ್ರಾ)	24432	18287	5931	6529	2021	57200
3	ರಾಮನಗರ	27499	21922	6247	7211	2492	65371
4	ಬೆಂಗಳೂರು (ನ)	46999	35339	11218	11018	3193	107767
5	ಬೆಳಗಾಂ	170212	176810	42446	41919	9730	441117
6	ಬಳ್ಳಾರಿ	73419	71990	20654	19982	4144	190189
7	ಬೀದರ್	64618	65228	12356	13540	3159	158901
8	ಬಿಜಾಪುರ	66940	72540	17283	17816	3567	178146
9	ಚಾಮರಾಜನಗರ	40681	29370	8977	8711	2632	90371
10	ಚಿಕ್ಕಮಗಳೂರು	29958	27317	6560	7135	3029	73999
11	ಚಿತ್ರದುರ್ಗ	64320	48128	14875	15516	3618	146457
12	ದಕ್ಷಿಣ ಕನ್ನಡ	49458	44039	9908	10903	4009	118317
13	ದಾವಣಗೆರೆ	55615	52896	13553	13696	3356	139116
14	ಧಾರವಾಡ	46821	46639	11260	10953	2388	118061
15	ಗದಗ	38463	38826	9490	8329	2044	97152
16	ಗುಲ್ಬರ್ಗ	134350	128565	32047	32641	5852	333455
17	ಹಾಸನ	43764	35941	10265	10171	4200	104341
18	ಹಾವೇರಿ	62167	60224	14871	13871	3267	154400
19	ಕೊಡಗು	18253	11979	3786	3973	1613	39604
20	ಕೋಲಾರ	48735	38386	10548	11966	3373	113008
21	ಚಿಕ್ಕಬಳ್ಳಾಪುರ	40837	34606	9254	9620	3182	97499
2	ಕೊಪ್ಪಳ	53346	53579	13146	12940	2738	13574

2							8
23	ಮಂಡ್ಯ	53650	44220	12348	12491	4289	126998
24	ಮೈಸೂರು	78152	58736	19032	17941	4785	178646
25	ರಾಯಚೂರು	85510	79150	19960	20602	3538	208760
26	ಶಿವಮೊಗ್ಗ	44389	42616	10782	9919	4064	111770
27	ತುಮಕೂರು	82279	70939	17796	19079	6756	196849
28	ಉಡುಪಿ	29738	22813	5763	6977	2226	67517
29	ಉತ್ತರಕನ್ನಡ	40860	38879	8955	9192	3466	101352
ರಾಜ್ಯದ ಒಟ್ಟು		1689385	1541097	397990	403236	106501	4138209

ರಾಜ್ಯದ 29 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನಾಥ ಮಕ್ಕಳ ಕುಟೀರದ ಸಂಖ್ಯೆ ಹಾಗೂ ಫಲಾನುಭವಿಗಳ ಸಂಖ್ಯೆ:

ಕ್ರಮ ಸಂಖ್ಯೆ	ಜಿಲ್ಲೆ	ಕುಟೀರಗಳ ಸಂಖ್ಯೆ	ಫಲಾನುಭವಿಗಳು ಸಂಖ್ಯೆ
1.	ಹಾಸನ	4	100
2.	ಬೆಂಗಳೂರು ಗ್ರಾಮಾಂತರ	20	500
3.	ಶಿವಮೊಗ್ಗ	09	225
4.	ತುಮಕೂರು	28	700
5.	ದಾವಣಗೆರೆ	12	300
6.	ಮೈಸೂರು	19	475
7.	ಮಂಗಳೂರು	20	500
8.	ಬೆಳಗಾಂ	11	275
9.	ಬಿಜಾಪುರ	14	350
10.	ಧಾರವಾಡ	09	225
11.	ಗದಗ	03	75
12.	ಬೀದರ್	24	600
13.	ಬೆಂಗಳೂರು ನಗರ	24	600
14.	ಚಿತ್ರದುರ್ಗ	05	125
15.	ಕೋಲಾರ	04	100

16.	ರಾಮನಗರ	10	250
17.	ಚಿಕ್ಕಬಳ್ಳಾಪುರ	07	175
18.	ಚಿಕ್ಕಮಗಳೂರು	01	25
19.	ಕೊಡಗು	03	75
20.	ಮಂಡ್ಯ	05	125
21.	ಚಾಮರಾಜನಗರ	14	350
22.	ಉಡುಪಿ	--	--
23.	ಕಾರವಾರ	08	200
24.	ಬಾಗಲಕೋಟೆ	12	300
25.	ಗುಲ್ಬರ್ಗ	15	225
26.	ಹಾವೇರಿ	09	375
27.	ಬಳ್ಳಾರಿ	09	225
28.	ರಾಯಚೂರು	05	125
29.	ಕೊಪ್ಪಳ	05	125
	ಒಟ್ಟು	309	7725

ಅನುಬಂಧ–2ಎ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

2008–09ನೇ ಸಾಲಿಗೆ ನಿಗಮದಿಂದ ಅನುಷ್ಠಾನಗೊಳಿಸಲಾದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆದ ಜಿಲ್ಲಾವಾರು ಮಾಹಿತಿ

ಕ್ರ ಸಂ.	ಜಿಲ್ಲೆಗಳು	ಉದ್ಯೋಗಿನಿ		ಆಸರೆ		ಮಹಿಳ ತರಬೇತಿ ಯೋಜನೆ		ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ		ದೇವದಾಸಿ ಪುನರ್ ವಸತಿ ಯೋಜನೆ		ಮಾಜಿ ದೇವದಾಸಿ ಮಹಿಯರಿಗೆ ಮಾಸಾಶನ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಬೆಂಗಳೂರು(ಗ್ರಾ) ಜಿಲ್ಲೆ	62	7650000	8	280000	100	8.00	150	0.75	–	–	–	–
2	ಬೆಂಗಳೂರು ನಗರ ಜಿಲ್ಲೆ	520	4527500	75	2625000	100	8.50	615	5.80	–	–	–	–
3	ಬೆಳಗಾವಿ	399	3562500	13	455000	120	8.50	370	1.30	–	377794	3064	12219600
4	ಬಳ್ಳಾರಿ	253	2425000	8	280000	120	8.00	360	1.25	249	4041981	1083	4795200
5	ಬೀದರ್	184	1810000	30	1050000	105	8.50	–	–	–	–	–	–
6	ಬಿಜಾಪುರ	189	182000	25	875000	120	8.50	–	–	100	27006	218	743760

ಲ-೧೦೨೪-೪೧

			0								95	7	0
7	ಬಾಗಲಕೋಟೆ	176	1707500	28	980000	90	7.50	–	–	250	4632000	2987	12537600
8	ಚಿಕ್ಕಮಗಳೂರು	112	1162500	22	770000	100	7.50	375	1.35	–	–	–	–
9	ಚಿತ್ರದುರ್ಗಾ	154	1580000	11	385000	90	7.00	155	0.70	–	–	–	–
10	ದಾವಣಗೆರೆ	166	1657500	18	630000	100	7.00	153	0.80	–	–	–	–
11	ದಕ್ಷಿಣ ಕನ್ನಡ	144	1407500	25	875000	100	7.50	385	1.40	–	–	–	–
12	ಧಾರವಾಡ	163	1582500	19	665000	120	9.00	365	1.35	100	2039987	470	1356000
13	ಗದಗ್	114	1190000	14	490000	105	7.00	–	–	100	2306494	725	2832000
14	ಹಾವೇರಿ	161	1580000	9	315000	90	7.00	–	–	96	2096760	323	1269600
15	ಗುಲ್ಬರ್ಗಾ	337	3090000	17	595000	120	9.00	170	0.75	100	2164809	806	2731200
16	ಹಾಸನ	121	125750	17	595000	100	7.50	–	–	–	–	–	–

			0										
17	ಕೊಡಗು	38	567500	27	945000	95	7.50	–	–	–	–	–	–
18	ಕೋಲಾರ	140	1440000	25	875000	90	7.00	–	–	–	–	–	–
19	ಮಂಡ್ಯ	137	1365000	19	665000	95	7.00	160	0.80	–	–	–	–
20	ಮೈಸೂರು	250	2357500	21	735000	90	7.50	370	1.35	–	–	–	–
21	ಚಾಮರಾಜನಗರ	88	1002500	19	665000	100	8.00	–	–	–	–	–	–
22	ರಾಯಚೂರು	212	2067500	30	1050000	105	9.00	–	–	250	3984800	2284	8864400
23	ಕೊಪ್ಪಳ	148	1490000	29	1015000	90	7.00	–	–	250	4821016	1801	8007600
24	ಶಿವಮೊಗ್ಗ	133	1347500	21	735000	120	8.50	–	–	–	–	–	–
25	ತುಮಕೂರು	245	2310000	25	875000	90	7.50	370	1.40	–	–	–	–
26	ಕಾರವಾರ	96	101750	20	70000	110	8.50	–	–	–	–	–	–

			0		0								
27	ಉಡುಪಿ	82	907500	24	840000	100	7.00	–	–	–	–	–	–
28	ರಾಮನಗರ	82	932500	7	245000	100	7.00	–	–	–	–	–	–
29	ಚಿಕ್ಕಬಳ್ಳಾಪುರ	96	1070000	7	245000	95	7.50	–	–	–	–	–	–

ಪರಾ: 2008–09ನೇ ಸಾಲಿನಲ್ಲಿ ಮಾರುಕಟ್ಟೆ ಯೋಜನೆಯಲ್ಲಿ ಜಿಲ್ಲಾವಾರು ಗುರಿ ನಿಗದಿಯಾಗಿರುವುದಿಲ್ಲ

12-00 PM

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ, ನಾನು ಇದರ ಬಗ್ಗೆ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುವುದು ಏನೆಂದರೆ, ಈ ವಿಡೋ ಪೆನ್ಷನ್ ಎಂದು ನಾವು ಏನು ಕೊಡುತ್ತಿದ್ದೇವೆ, ಈ ವಿಡೋ ಪೆನ್ಷನ್‌ನಲ್ಲಿ income limit ಆರು ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಆರು ಸಾವಿರ ರೂಪಾಯಿಗಳನ್ನು ವಿಡೋ ಪೆನ್ಷನ್‌ಗೆ ಎಂದು ಇನ್‌ಕಮ್ ಇಟ್ಟಿರುವುದು. ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಅದೇ ವಿಡೋ ಪೆನ್ಷನ್‌ಗೆ 20 ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಆದರಿಂದ ಈ ನಾರ್ಮಲ್‌ಆಗಿ ಕೊಡುವಂಥ ವಿಡೋ ಪೆನ್ಷನ್‌ಗೂ ಕೂಡ ಇನ್‌ಕಮ್ ಲಿಮಿಟ್‌ಅನ್ನು 20 ಸಾವಿರ ರೂಪಾಯಿಗಳಿಗೆ ಏರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿಯಾಗಿ child labour ಬಗ್ಗೆ ನಾವು ಕಾರ್ಯಕ್ರಮವನ್ನು ಏನು ಹಾಕಿಕೊಂಡಿದ್ದೇವೆ ಅದು ಸಾಕಾಗುತ್ತಿಲ್ಲ. ಇವೊತ್ತು ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಮಕ್ಕಳನ್ನು ಕೆಲಸಕ್ಕೆ ಕಳುಹಿಸುವಂಥ ಕಾರ್ಯಕ್ರಮ ಜಾಸ್ತಿ ನಡೆಯುತ್ತಿರುವುದರಿಂದ, ಅದನ್ನು ನಾವು ವಿಶೇಷವಾಗಿ ನೋಡಬೇಕಾಗುತ್ತದೆ. ಏಕೆಂದರೆ, ಓದಬೇಕಾಗಿರುವ ಮಕ್ಕಳನ್ನು ಕೆಲಸಕ್ಕೆ ಕಳುಹಿಸಿ ಅವರ ತಂದೆ-ತಾಯಿಗಳು ಬದುಕು ನಡೆಸುವಂಥ ರೀತಿಯಲ್ಲಿ ಇವೋತ್ತು ಸಮಾಜದಲ್ಲಿ ನಡೆಯುತ್ತಿರುವುದರಿಂದ ಕೆಲಸಕ್ಕೆ ಹೋಗುವ ಮಕ್ಕಳನ್ನು ಅಲ್ಲಿಂದ ಕರೆದುಕೊಂಡು ಬಂದು ಓದುವುದಕ್ಕೆ ಬಿಟ್ಟರೆ ಒಳ್ಳೆಯದು. ಮಾನ್ಯ ಸಚಿವರೆ, ಅವರ ತಂದೆ ತಾಯಿಗಳಿಗೂ ಸಹ ನಾವು ಏನಾದರೂ ಸಹಾಯ ಮಾಡುವ ಕಾರ್ಯಕ್ರಮ ತರಬೇಕಾಗುತ್ತದೆ. ಅದೇ ರೀತಿಯಲ್ಲಿ ಏನು ಮಹಿಳೆಯರಿಗೆ ನಾವು protectionಗೋಸ್ಕರ women commission ಎಂದು ಮಾಡಿದ್ದೇವೆ, ಆ Women Commissionಗೆ ಛೇರ್‌ಮನ್ ಆಗಿ ಈಗ ನಾವು political appointment ಮಾಡುತ್ತಿದ್ದೇವೆ. ಅಲ್ಲಿ ವಿಶೇಷವಾಗಿ ಯಾರಾದರೂ ಒಳ್ಳೆಯ ಅಧಿಕಾರಿಗಳನ್ನು ಹಾಕಿ, ಇನ್ನಷ್ಟು ಒಳ್ಳೆಯ ಕೆಲಸವಾಗಬೇಕು. ಏಕೆಂದರೆ ದಿನ ಬೆಳಗ್ಗೆ ಪೇಪರ್ ನೋಡುತ್ತೇವೆ. ಮಹಿಳೆಯರ ಮೇಲೆ ಅತ್ಯಾಚಾರವಾಗುತ್ತಿದೆ. ಆದ್ದರಿಂದ ಅದನ್ನು ತಡೆಗಟ್ಟುವಂಥ ರೀತಿಯಲ್ಲಿ ಯಾರಾದರೂ ಒಳ್ಳೆಯ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಸಚಿವರು ಹೇಳಬೇಕು.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ಬಾಲ ಕಾರ್ಮಿಕ ಪದ್ಧತಿಯ ಪಿಡುಗನ್ನು ನಿವಾರಣೆ ಮಾಡುವುದಕ್ಕೋಸ್ಕರ ರಾಜ್ಯ ಸರ್ಕಾರ ತೀವ್ರತರವಾದಂಥ ಕ್ರಮವನ್ನು ಕೈಗೊಂಡಿದೆ. ಇದನ್ನು ನಮ್ಮ ಕಾರ್ಮಿಕ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಸಹಯೋಗದೊಂದಿದೆ ನಾವು ಪರಿಣಾಮಕಾರಿಯಾಗಿ ತಡೆಗಟ್ಟುವಂಥ ಪ್ರವೃತ್ತಿಯನ್ನು ಹೆಚ್ಚಿಸುತ್ತಿದ್ದೇವೆ. ಇದರ ಜೊತೆಗೆ ಹೊರ ರಾಜ್ಯಗಳಿಂದ ಈ ಬಾಲಕಾರ್ಮಿಕರು ರಾಜ್ಯಕ್ಕೆ ನುಸುಳುತ್ತಿರುವುದು ಇತ್ತೀಚೆಗೆ ಕಂಡು

ಬಂದಿದೆ, ಮೊನ್ನೆ ಬೆಂಗಳೂರಿನ ಒಂದು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 14 ಮಕ್ಕಳನ್ನು ಮಾರಾಟ ಮಾಡಿರುವ ಪ್ರಕರಣ ಪತ್ತೆ ಆದಂತಹ ಸಂದರ್ಭದಲ್ಲಿ ನಮ್ಮ ಇಲಾಖೆ ಇದರಲ್ಲಿ ನೇರವಾಗಿ ಸಂಪರ್ಕ ವಹಿಸಿ, ಪೊಲೀಸ್ ಇಲಾಖೆ ಜೊತೆಗೆ ಸೇರಿ ಆ ಮಕ್ಕಳನ್ನು ಬಾಲ ನ್ಯಾಯಾಲಯದಲ್ಲಿ ಹಾಜರುಪಡಿಸಿ ಅವರಿಗೆ ಸೂಕ್ತ ರಕ್ಷಣೆ ನೀಡಿ ವಾಪಸ್ಸು ಅವರ ತಂದೆ–ತಾಯಿಗಳು ಬಳಿಗೆ ಬಿಟ್ಟು ಬಂದಿದ್ದು ಆಗಿದೆ. ಇಂತಹ ವಿಚಾರಗಳಲ್ಲಿ ಸರ್ಕಾರ ದಿಟ್ಟ ನಿರ್ಧಾರ ಕೈಗೊಂಡು ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಶಸ್ವಿಯಾಗುತ್ತದೆ ಎನ್ನುವ ವಿಶ್ವಾಸ ನಮ್ಮಲ್ಲಿದೆ.

ಶ್ರೀ ಎನ್.ಎ. ಹ್ಯಾರಿಸ್: ತಂದೆ–ತಾ ...ಗಳು ಅವರ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಿದ್ದಾರೆ. ನಾವು ಆ ಮಕ್ಕಳನ್ನು ಹಿ ...ಾಯಿಯ ಬಳಿ ಬಿಟ್ಟರೆ ಅವರನ್ನು ಮತ್ತೆ ಕೆಲಸಕ್ಕೆ ...ಾಯಿಗಳಿಗೆ ಕಷ್ಟವಿರುವುದರಿಂದ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಿ... ನಾವು ಇದಕ್ಕೆ ಪರಿಹಾರವಾಗಿ ಒಂದು solution ಆಗಿ ಆ ತಂದೆ–ತಾ... rehabilitate ಮಾಡುವಂಥಾದ್ದು ಏನಾದರೂ ಇದ್ದರೆ ಮಾಡಬೇಕಾಗುತ್ತದ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ.ಎಂ.ನರೇಂದ್ರ ಸ್ವಾಮಿ: ಈಗ ನಮ್ಮ ಇಲಾಖೆಗೆ ಸಂಬಂಧಪಟ್ಟಂಥ ಪ್ರಶ್ನೆಗೆ ನೇರವಾದ ಉತ್ತರವೇನೆಂದರೆ, ಆ ಮಕ್ಕಳಿಗೆ ಆಗುವಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಮಾತ್ರ ನಮಗೆ ಅಧಿಕಾರವಿದೆಯೇ ಹೊರತು, ಅವರ ತಂದೆ–ತಾಯಿಗಳ ಪಾಲನೆ ಪೋಷಣೆಗಳಿಗೆ ನಮಗೆ ಅಧಿಕಾರವಿಲ್ಲ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ಸರ್ಕಾರ ಅದಕ್ಕೆ ಏನಾದರೂ ಒಂದು ಮಾರ್ಗೋಪಾಯ ಕಂಡುಹಿಡಿಯಬೇಕಾಗುತ್ತದೆ.

ಅಧ್ಯಕ್ಷರು: ಏನಾದರೂ ಸಲಹೆ ಕೊಡಿ. ನೀವು ಸಲಹೆ ಕೊಡಿ. ಏನು ಮಾಡಬೇಕೆಂದು ಹೇಳಿ.

ಡಾ: ಹೆಚ್.ಸಿ.ಮಹದೇವಪ್ರಸಾದ್: ಒಂದು ಪರಿಹಾರದ ರೂಪದಲ್ಲಿ ಯಾವುದಾದರೂ ಇಲಾಖೆಯ ಮುಖಾಂತರ ಅಥವಾ ತಮ್ಮ ಇಲಾಖೆಯ ಮುಖಾಂತರ ಸಾಲಸೌಲಭ್ಯ ಕೊಟ್ಟು ಅವರ ಆರ್ಥಿಕ ಸ್ಥಿತಿ ಸುಧಾರಣೆ ಆಗುವಂಥ ಒಂದು ವ್ಯವಸ್ಥೆ ಮಾಡಿದರೆ, ಆಗ ಮಕ್ಕಳನ್ನು ಅವರ ಬಾಲ ಕಾರ್ಮಿಕರಾಗಿ ಕೆಲಸಕ್ಕೆ ಕಳುಹಿಸಲು ಅವಕಾಶವಾಗುವುದಿಲ್ಲ.

ಅಧ್ಯಕ್ಷರು: ನೀವೇ ಹೇಳಿ ಏನು ಮಾಡಬಹುದು. General ಆಗಿ ಮಾತನಾಡುವುದು ಬೇಡ. ಏನಾದರೂ technical ಆಗಿ ವಿಚಾರ ಮಾಡೋಣ.

ಶ್ರೀ ಎನ್.ಎ. ಹ್ಯಾರಿಸ್: ಅಂತಹ ತಂದೆ ತಾಯಿಗಳಿಗೆ ಏನಾದರೂ ಮಾಡಬಹುದು. ಇದು ಹೆಚ್ಚಾಗಿ ಬೆಂಗಳೂರು ಸಿಟಿಯಲ್ಲಿ ಕಾಣಿಸುತ್ತಿದೆ. ಅಂತಹವರಿಗೆ ನಮ್ಮ ಸರ್ಕಾರದಲ್ಲಿ ಬೇಕಾದಷ್ಟು ಸ್ಕೀಂಗಳು ಇವೆ. ಅವುಗಳಿಂದ

ಏನಾದರೂ ಲೋನ್ ಕೊಡುವ ಕಾರ್ಯಕ್ರಮವನ್ನು ಸರ್ಕಾರದವರಿಂದ ಮಾಡಬಹುದು.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ಇದರ ಬಗ್ಗೆ ತಮ್ಮ ಸಲಹೆಯಂತೆ ಸಮಾಲೋಚನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎನ್.ಎ.ಹ್ಯಾರೀಸ್: ಮಾನ್ಯ ಅಧ್ಯಕ್ಷರೆ, ಈ ವಿಡೋ ಪೆನ್ಷನ್‌ನಲ್ಲಿ ಇನ್ನೊಂದು ದೊಡ್ಡ ಸಮಸ್ಯೆಯಿದೆ. ಈ ಡೆತ್ ಸರ್ಟಿಫಿಕೇಟ್ ಕೆಲವರಿಗೆ ಸಿಗುತ್ತಿಲ್ಲ. ಎಲ್ಲಾ ಕರೆಕ್ಟ್ ಆಗಿ ಇರುತ್ತದೆ. ಆದರೆ ಡೆತ್ ಸೆಟಿಫೀಕೇಟ್ ಸಿಗದೇ ಇರುವುದರಿಂದ ವಿಡೋ ಪೆನ್ಷನ್ ಪಡೆದುಕೊಳ್ಳುವುದಕ್ಕೆ ಆಗುತ್ತಿಲ್ಲದಿರುವಂಥ ಸಂದರ್ಭಗಳು ಜಾಸ್ತಿ ಇವೆ. ಅವರಿಗೆ ಏನಾದರೂ ಮಾಡಬೇಕು. ಏಕೆಂದರೆ, ಅವರು ಕೋರ್ಟ್‌ಗೆ ಹೋಗಿ affidavit ಕೊಡುವಂಥ ಸಂದರ್ಭಗಳು ಬರುತ್ತಿರುವುದರಿಂದ, ಅವರು ಬಡವರಾಗಿರುವುದರಿಂದ, ಕೋರ್ಟ್‌ಗೆ ಹೋಗಿ ತರುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಏನಾದರೂ ಪರಿಹಾರ ಮಾಡಬೇಕು.

ಅಧ್ಯಕ್ಷರು: ವಿಡೋ ಪೆನ್ಷನ್ ಬಗ್ಗೆ ಹೇಳಿ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ: ವಿಧವಾ ವೇತನದ ವಿಚಾರವಾಗಿ ಸನ್ಮಾನ್ಯ ಸದಸ್ಯರು ಎತ್ತಿದ ಪ್ರಶ್ನೆಗೆ ಹೇಳುವುದು ಏನೆಂದರೆ, ಈಗಾಗಲೇ ಸರ್ಕಾರ ಈ ಒಂದು ಆದಾಯ ಮಿತಿಯನ್ನು 6,000.00 ದಿಂದ 20,000.00 ರೂಪಾಯಿಗಳಿಗೆ ಏರಿಸುವಂಥ ಕ್ರಮವನ್ನು ವಹಿಸಲಾಗಿದೆ. ಮತ್ತು ಇದರಲ್ಲಿ ಸಣ್ಣ–ಪುಟ್ಟ ಲೋಪಗಳು ಏನೇ ಇದ್ದರೂ ಅದನ್ನು ಸರಿಪಡಿಸತಕ್ಕಂಥ ಜವಾಬ್ದಾರಿ ನಮ್ಮದು.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಡೆತ್ ಸರ್ಟಿಫಿಕೇಟ್ ಬಹಳ important ಇದೆ. ಡೆತ್ ಸರ್ಟಿಫಿಕೇಟ್‌ಅನ್ನು ಕೋರ್ಟ್‌ನಿಂದ ಪಡೆಯಬೇಕಾದರೆ ಅವರಿಗೆ ಅರು ತಿಂಗಳ ಸಮಯಾವಕಾಶ ಬೇಕಾಗುತ್ತದೆ. ಅವರಿಗೆ ಇದನ್ನು ಪಡೆಯಲು ಆಗುತ್ತಿಲ್ಲ. ಈ ಹಿಂದೆ VA ಮತ್ತು RI report ಮೇಲೆ ಡೆತ್ ಸರ್ಟಿಫಿಕೇಟ್ ಕೊಡುತ್ತಿದ್ದರು. ಈಗ ಅದನ್ನು cancel ಮಾಡಿದ್ದಾರೆ. ಅದಕ್ಕೆ ಈಗ ಇಲಾಖೆಯಿಂದ ಏನು direction ಕೊಡಬೇಕೆಂದರೆ ಅಥವಾ ಕಂದಾಯ ಸಚಿವರು ಇಲ್ಲಿರುವುದರಿಂದ ಹೇಳುವುದು ಏನೆಂದರೆ, ಈಗ ಒಬ್ಬರು 20 ವರ್ಷಗಳ ಹಿಂದೆ ಸತ್ತಿರುತ್ತಾರೆ, ಈಗ ಅಲ್ಲಿ ಏನೂ ರೆಕಾರ್ಡ್ ಇರುವುದಿಲ್ಲ, ಡೆತ್ ಸರ್ಟಿಫಿಕೇಟ್‌ಅನ್ನು ಕೋರ್ಟ್‌ನಿಂದ ಪಡೆಯಬೇಕಾದರೆ ಆರು ತಿಂಗಳುಗಳು ಬೇಕಾಗುತ್ತದೆ. ಅವರಿಂದ ಇದು ಆಗುವುದಿಲ್ಲ. ಆದ್ದರಿಂದ, VA ಮತ್ತು RI report ಮೇಲೆ ಡೆತ್ ಸರ್ಟಿಪೀಕೇಟ್ ಇಷ್ಯೂ ಮಾಡುವುದಕ್ಕೆ ನೀವು departmentಗೆ direction ಕೊಡಬೇಕು. ಈಗ ಇದರಲ್ಲಿ 30% pending ಇದೆ. ಇದರ ಬಗ್ಗೆ ಕಂದಾಯ ಸಚಿವರು ಸ್ಪಂದಿಸಬೇಕು.

ಅಧ್ಯಕ್ಷರು: ಕಂದಾಯ ಸಚಿವರು ಇದರ ಬಗ್ಗೆ ಹೇಳಬೇಕು.

ಶ್ರೀ ನೆ.ಲ.ನರೇಂದ್ರ ಬಾಬು: ಸನ್ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಮಹಿಳೆಯರು, ವಿಧವೆಯರು, ಅಸಹಾಯಕರು, ವಿಶೇಷವಾಗಿ ಈ ಡೆತ್ ಸರ್ಟಿಫಿಕೇಟ್‌ಅನ್ನು obtain ಮಾಡುವುದಕ್ಕೆ ಆಗದೇ ಇರುವಂಥವರು suffer ಆಗುತ್ತಿದ್ದಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ತೀರ್ಮಾನ ಮಾಡಬೇಕು. Deserving ಇದ್ದವರಿಗೆ RI report ಹಾಕಿಸಿ ಕನಿಷ್ಠ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಕೋರ್ಟ್‌ಗೆ ಹೋಗಿ ಎಂದು ಹೇಳುತ್ತಾರೆ. ಅವರು ಮೊದಲೇ ಬಡವರಾಗಿರುವುದರಿಂದ ಅವರು ಕೋರ್ಟ್‌ಗೆ ಹೋಗಿ ತರಬೇಕಾದರೆ ಬಹಳ ಕಷ್ಟವಾಗುತ್ತದೆ. ದಯವಿಟ್ಟು ತಾವು ನಿರ್ದಿಷ್ಟಪಟ್ಟ ಸಚಿವರಿಗೆ, ರೆವಿನ್ಯೂ ಮಂತ್ರಿಗಳಿಗೆ ಹಾಗೂ ಸಂಬಂಧಪಟ್ಟವರಿಗೆ ಹೇಳಿ ಇದಕ್ಕೆ ಒಂದು ಪರಿಹಾರ ಮಾಡಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಬಹಳಷ್ಟು ಸಾಮಾಜಿಕ ನೆರವು ಈ ಯೋಜನೆಯಡಿಯಲ್ಲಿ ಪೆಂಡಿಂಗ್ ಇದೆ.

ಅಧ್ಯಕ್ಷರು: ಕಂದಾಯ ಸಚಿವರು ಈ ರೀತಿ ಮಾಡಬಹುದು. RIಯವರ ಒಂದು ರಿಪೋರ್ಟ್ ತೆಗೆದುಕೊಂಡು, ಸ್ಥಳೀಯವಾಗಿ ಅದರ ಬಗ್ಗೆ ವಿಚಾರಣೆ ಮಾಡಿಕೊಂಡು ತಕ್ಷಣವೇ certificate issue ಮಾಡಬಹುದು. ಅದನ್ನು consider ಮಾಡಿ.

ಶ್ರೀ ಬಿ.ಸಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಮೊದಲು ಊರಿನಲ್ಲಿರುವಂಥ ಪಟೇಲರು ಇದನ್ನು ಬರೆಯುತ್ತಿದ್ದರು. ಜನನ-ಮರಣ ದಾಖಲೆಗಳನ್ನು ಬರೆಯುತ್ತಿದ್ದರು. ಪ್ರತಿ ತಿಂಗಳು ಸರ್ಕಾರಕ್ಕೆ ವರದಿ ಕೊಡುತ್ತಿದ್ದರು. ಆ ರೀತಿ ಒಂದು system ಅನ್ನು village Accountants ಪ್ರತಿ ತಿಂಗಳು ಬರದುಕೊಟ್ಟರೆ immediate ಆಗಿ ಡೆತ್ ಸರ್ಟಿಫಿಕೇಟ್‌ಅನ್ನು ಕೊಡಬಹುದು. ಈ ಮೊದಲು ಪಟೇಲರು ಜನನ-ಮರಣ ದಾಖಲೆಗಳನ್ನು ಪ್ರತಿ ತಿಂಗಳು ಬರೆದು ಸರ್ಕಾರಕ್ಕೆ ಕಳುಹಿಸುತ್ತಿದ್ದರು.

ಶ್ರೀ ವಸಂತ ಕೆ. ಬಂಗೇರ: ಆ ಕಡೆ ಸಚಿವರಿಲ್ಲ, ಶಾಸಕರಿಲ್ಲ ಹಾಗೂ ಎಲ್ಲಾ ಸಚಿವರ ಆಫೀಸ್‌ಗಳು ಕೂಡ ಇಲ್ಲ. . . . . .

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಈಗ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ದಿನಾಂಕ 10-07-2009ರಂದು 02ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 44 ಪ್ರಶ್ನೆಗಳ ಪೈಕಿ 37 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.